2	ಯಕ್ಕೂರು–ಬುದಿಗದು ಮುಚೂರು ರಸ್ತೆ (ಹಂತ–2)	0.85	6.31	ಪೂರ್ಣಗೊಂಡಿದೆ
3	ಕುತ್ತೆತೂರು–ಬರಿಪಟ್ಲ ರಸ್ತೆ (ಹಂತ–3)	1.8	33.50	ಪ್ರಗತಿಯಲ್ಲಿದೆ
	ಒಟ್ಟು	103.36		

ಈ) 2005–06ನೇ ಸಾಲಿನಲ್ಲಿ ಸೂರತ್ಕಲ್ ಕ್ಷೇತ್ರದಲ್ಲಿ ಯಾವುದೇ ರಸ್ತೆಗಳಿಗೆ ಡಾಂಬರೀಕರಣ ಕೈಗೊಳ್ಳಲಾಗಿಲ್ಲ. ಹಂತ–3 ರ ಒಂದು ಕಾಮಗಾರಿಯು ಪ್ರಗತಿಯಲ್ಲಿದೆ.

829 (1305) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

01) ರಾಜ್ಯದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಈಜುಗಾರಿಕೆಯನ್ನು ಕಲಿಸಲು ಸರ್ಕಾರ ಕ್ರಮ ಜರುಗಿಸುವುದೇ;

02) ಈಜುಗಾರಿಕೆ ಅನುಭವವಿಲ್ಲದೆ ಸಾಕಷ್ಟು ವಿದ್ಯಾರ್ಥಿಗಳು ಹಾಗೂ ಮತ್ತಿತರರು ಜಲದುರಂತದಲ್ಲಿ ಸಾವಿಗೀಡಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;

03) ಈಜುಬಾರದ ವಿದ್ಯಾರ್ಥಿಗಳಿಗೆ ಶಿಕ್ಷಣದ ಹಂತದಲ್ಲಿಯೇ ವ್ಯಾಯಾಮ, ಯೋಗ ಶಿಕ್ಷಣದ ಜೊತೆಗೆ ಈಜು ಕಲಿಕೆಯನ್ನು ಕಲಿಸಲು ಸರ್ಕಾರ ಚಿಂತಿಸುವುದೇ?

ಶ್ರೀ ಬಿ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

01) ಪ್ರೌಢಶಾಲೆಗಳಲ್ಲಿ ಈಜು ಕಲಿಕೆ ನೀಡುವ ಕಾರ್ಯಕ್ರಮವಿರುವುದಿಲ್ಲ.

02) ಗಮನಕ್ಕೆ ಬಂದಿದೆ.

03) ಕ್ರಮ ಸಂಖ್ಯೆ: (1)ರಲ್ಲಿ ಉತ್ತರ ನೀಡಿದೆ.

830 (1182) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

01) ಪ್ರಾಥಮಿಕ ಶಾಲೆಯಿಂದ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಪ್ರೌಢಶಾಲೆಗೆ ಬಡ್ತಿ ನೀಡಲು ಸರ್ಕಾರ ಅನುಸರಿಸುವ ನಿಯಮಾವಳಿಗಳೇನು ವಿವರ ನೀಡುವುದು;

02) ಪ್ರಸ್ತುತ ಸಾಲಿನಲ್ಲಿ ಬಡ್ತಿ ಪ್ರಕ್ರಿಯೆ ಎಲ್ಲಾ ವಿಭಾಗಗಳಲ್ಲೂ ಯಾವಾಗ ಆರಂಭವಾಗುವುದು;

03) ಬಡ್ತಿ ಪ್ರಕ್ರಿಯೆಯಲ್ಲಿ ಹಿಂದಿ ಶಿಕ್ಷಕರನ್ನು ಕಡೆಗಣಿಸಿರುವುದೇಕೆ?

ಶ್ರೀ ಬಿ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

01) ಪ್ರಾಥಮಿಕ ಶಾಲೆಯಿಂದ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರಿಗೆ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 59 ಎಸ್ ಆರ್ಇ 2002, ದಿನಾಂಕ: 24.06.2003 ರನ್ವಯ ಪ್ರೌಢಶಾಲಾ ಶಿಕ್ಷಕರಾಗಿ ಬಡ್ತಿಯನ್ನು ಶೇಕಡಾ 45 : 2 : 1 : 1 : 1 ರಂತೆ ನೀಡಲಾಗುತ್ತಿದೆ.

ಪ್ರಾಥಮಿಕ ಶಿಕ್ಷಕರು ಶೇ. 45
ವೃತ್ತಿ ಶಿಕ್ಷಕರು ಶೇ. 2
ಸಂಗೀತ ಶಿಕ್ಷಕರು ಶೇ. 1
ಚಿತ್ರಕಲಾ ಶಿಕ್ಷಕರು ಶೇ. 1
ನರ್ಸರಿ ಶಿಕ್ಷಕರು ಶೇ. 1

02) ಈ ಬಗ್ಗೆ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಬಡ್ತಿ ಬಗ್ಗೆ ಕ್ರಮ ಕೈಗೊಳ್ಳಲು ದಿನಾಂಕ: 30.11.2005 ಹಾಗೂ 19.12.2005 ರಂದು ಸೂಚನೆಗಳನ್ನು ನೀಡಲಾಗಿದೆ. ಈ ಸಂಬಂಧ ಬಡ್ತಿ ಪ್ರಕ್ರಿಯೆ ನಡೆಯುತ್ತಿದೆ.

03) ಅರ್ಹ ಅಭ್ಯರ್ಥಿಗಳನ್ನು ಪರಿಗಣಿಸಲಾಗುತ್ತಿದೆ.

831 (1183) ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಸಕರ ಆಪ್ತ ಸಹಾಯಕರಾಗಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ನಿರ್ಬಂಧ ವಿಧಿಸಿದೆ ಏಕೆ;

ಆ) ಯಾವುದೇ ಇಲಾಖೆಯಿಂದಲಾದರೂ ಒಬ್ಬರನ್ನು ನೇಮಕ ಮಾಡಿಕೊಂಡಾಗ ಆಗುವ ಕಾರ್ಯ ನಿರ್ವಹಣೆಯಷ್ಟೇ ಶಿಕ್ಷಕರಿಂದ ಆಗುವುದರಿಂದ ಇವರ ನೇಮಕಕ್ಕೆ ಸರ್ಕಾರ ಅನುಮತಿ ನೀಡುವುದೇ;

ಇ) ಸರ್ಕಾರಿ ನೌಕರರ ಸಂಖ್ಯೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಶಿಕ್ಷಕರನ್ನು ಕೆಲವು ಶಾಸಕರು ಆಯ್ಕೆ ಮಾಡಿಕೊಳ್ಳುವುದರಿಂದ (ಒಬ್ಬರನ್ನು ಮಾತ್ರ) ಶೈಕ್ಷಣಿಕ ಪ್ರಗತಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲದಿರುವುದರ ಬಗ್ಗೆ ವಿನಾಯಿತಿ ನೀಡಲು ಸರ್ಕಾರ ಗಮನಿಸುತ್ತಿದೆಯೇ?

ಶ್ರೀ ಬಿ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಶಿಕ್ಷಣ ಇಲಾಖೆಯಲ್ಲಿ ಪ್ರಸ್ತುತ ಶಿಕ್ಷಕರ ಕೊರತೆಯಿರುವುದರಿಂದ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗುತ್ತಿರುವುದರಿಂದ ಈ